ಬೆಂಗಳೂರು ನಗರದಲ್ಲಿರುವ ಗೃಹನಿರ್ಮಾಣ ಸಹಕಾರ ಸಂಘಗಳ ವಿಚಾರಣೆಗಳು.

237(2084)

ಶ್ರೀ ಎಸ್.ಸುರೇಶ್‌ಕುಮಾರ್(ರಾಜಾಜಿನಗರ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರದಲ್ಲಿರುವ ಎಷ್ಟು ಗೃಹ ನಿರ್ಮಾಣ ಸಹಕಾರ ಸಂಘಗಳು ವಿವಿಧ ರೀತಿಯ ವಿಚಾರಣೆ ಎದುರಿಸುತ್ತಿವೆ? (ವಿವರಗಳನ್ನು ನೀಡುವುದು)

2) ಈ ವಿಚಾರಣೆಗಳು ಎಂದಿನಿಂದ ಪ್ರಾರಂಭವಾಗಿದೆ?

3) ವಿಚಾರಣೆ ತ್ವರಿತ ಗತಿಯಲ್ಲಿ ಮುಗಿಸಿ ಸದಸ್ಯರುಗಳ ನಿವೇಶನ ಪಡೆಯುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ.ಕೆ.ಶಿವಕುಮಾರ (ಸಹಕಾರ ಸಚಿವರು):

1) ಬೆಂಗಳೂರು ನಗರದಲ್ಲಿರುವ 9 ಗೃಹನಿರ್ಮಾಣ ಸಹಕಾರ ಸಂಘಗಳು ವಿಚಾರಣೆಯನ್ನು ಎದುರಿಸುತ್ತಿವೆ. ಅವುಗಳ ವಿವರ ಈ ಕೆಳಕಂಡಂತಿದೆ:

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 64ರಡಿ ವಿಚಾರಣೆ.

1) ಜವಾಹರ ಗೃಹನಿರ್ಮಾಣ ಸಹಕಾರ ಸಂಘ(ನಿ), ಬೆಂಗಳೂರು

2) ಏರ್‌ಕ್ರಾಫ್ಟ್ ನೌಕರರ ಗೃಹನಿರ್ಮಾಣ ಸಹಕಾರ ಸಂಘ (ನಿ), ಬೆಂಗಳೂರು

3) ಶಾಸಕರ ಗೃಹನಿರ್ಮಾಣ ಸಹಕಾರ ಸಂಘ(ನಿ), ಬೆಂಗಳೂರು

4) ಸಹಕಾರ ಇಲಾಖಾ ನೌಕರರ ಗೃಹನಿರ್ಮಾಣ ಸಹಕಾರ ಸಂಘ (ನಿ), ಬೆಂಗಳೂರು

5) ತಲಕಾವೇರಿ ಗೃಹ ನಿರ್ಮಾಣ ಸಹಕಾರ ಸಂಘ(ನಿ), ಬೆಂಗಳೂರು.

6) ಎಸ್ಕಾರ್ಟ್ಸ್ ಅಂಡ್ ಗೊಯೆಟ್ಸ್ ನೌಕರರ ಗೃಹನಿರ್ಮಾಣ ಸಹಕಾರ ಸಂಘ (ನಿ), ಬೆಂಗಳೂರು.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 65ರಡಿ ಪರಿವೀಕ್ಷಣೆ.

7) ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಯಕರ್ತರ

ಗೃಹನಿರ್ಮಾಣ ಸಹಕಾರ ಸಂಘ (ನಿ), ಬೆಂಗಳೂರು.

8) ಬಾಪೂಜಿ ಗೃಹನಿರ್ಮಾಣ ಸಹಕಾರ ಸಂಘ (ನಿ) ಬೆಂಗಳೂರು

9) ವಿಜಯ ಬ್ಯಾಂಕ್ ನೌಕರರ ಗೃಹನಿರ್ಮಾಣ ಸಹಕಾರ ಸಂಘ (ನಿ), ಬೆಂಗಳೂರು

2) ಈ ಸಂಘಗಳ ವಿಚಾರಣೆಗಳು ಈ ಕೆಳಕಂಡ ದಿನಾಂಕಗಳಂದು ಪ್ರಾರಂಭವಾಗಿರುತ್ತದೆ.

ಸಂಘದ ಹೆಸರು	ವಿಚಾರಣೆ ಪ್ರಾರಂಭಿಸಿದ ದಿನಾಂಕ
1) ಜವಾಹರ್ ಗೃ.ನಿ.ಸ.ಸಂ. (ನಿ), ಬೆಂಗಳೂರು	28-4-2001
2) ಏರ್‌ಕ್ರಾಫ್ಟ್ ನೌಕರರ ಗೃ.ನಿ.ಸ.ಸಂ. (ನಿ), ಬೆಂಗಳೂರು	16-3-2001
3) ತಾಸಕರ ಗೃ.ನಿ.ಸ.ಸಂ.(ನಿ), ಬೆಂಗಳೂರು	27-11-2000
4) ಸಹಕಾರ ಇಲಾಖಾ ನೌಕರರ ಗೃ.ನಿ.ಸ.ಸಂ.(ನಿ), ಬೆಂಗಳೂರು	26-5-2000
5) ತಲಕಾವೇರಿ ಗೃ.ನಿ.ಸ.ಸಂ.(ನಿ). ಬೆಂಗಳೂರು.	29-6-2000
6) ಎಸ್ಕಾರ್ಟ್ಸ್ ಅಂಡ್ ಗೊಯೆಟ್ಸ್ ನೌಕರರ ಗೃ.ನಿ.ಸ.ಸಂ.ನಿ,	29-6-2000
7) ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಯಕರ್ತರ ಗೃ.ನಿ.ಸ.ಸಂ.ನಿ, ಬೆಂಗಳೂರು	31-8-2000
8) ಬಾಪೂಜಿ ಗೃ.ನಿ.ಸ.ಸಂ.ನಿ, ಬೆಂಗಳೂರು	15-10-2000
9) ವಿಜಯ ಬ್ಯಾಂಕ್ ನೌಕರರ ಗೃ.ನಿ.ಸ.ಸಂ.ನಿ, ಬೆಂಗಳೂರು	29-06-2001

3) 3 ಸಹಕಾರ ಸಂಘಗಳ ವಿಚಾರಣಾ ವರದಿ ಬಂದಿದ್ದು ಕ್ರಮ ಕೈಗೊಳ್ಳಲಾಗಿದ್ದು, ಉಳಿಕೆ ವಿಚಾರಣೆಗಳನ್ನು ತ್ವರಿತವಾಗಿ ಮುಗಿಸಿ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಅಂಗವಿಕಲರಿಗಾಗಿ ಹಣಕಾಸು ಸಂಸ್ಥೆ ಪ್ರಾರಂಭಿಸುವುದು.